ಮಾಡಿಕೊಡೋಣ; ಈಗ ಏಡ್ಸ್ ಕಾಯಿಲೆಗೆ ಔಷಧಿ ಸಿಗಲಿಲ್ಲವೆಂದು ಕೇಂದ್ರ ಸರ್ಕಾರಕ್ಕೆ ರಾಜೀನಾಮೆ ಕೊಡಿ ಎಂದು ಕೇಳುವುದಕ್ಕಾಗುತ್ತದೆಯೇ?

(ಗೊಂದಲ)

ಅಧ್ಯಕ್ಷರು:- ಡೋಂಟ್ ಟೇಕ್ ಡೌನ್. ಮಾನ್ಯ ಚಂದ್ರೇಗೌಡರು ಹೇಳಿದ್ದನ್ನು ಮಾತ್ರ ಬರೆದುಕೊಳ್ಳಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಸರ್ಕಾರದ ಉತ್ತರವನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

ಅಧ್ಯಕ್ಷರು:- 5-6 ಜನರು ಮಾತನಾಡುವುದನ್ನು ಬರೆದುಕೊಳ್ಳಬೇಡಿ.

(ಈ ಹಂತದಲ್ಲಿ ಬಿಜೆಪಿ ಹಾಗೂ ಜೆಡಿ(ಯು) ಸದಸ್ಯರು ಸಭಾತ್ಯಾಗ ಮಾಡಿದರು)

(ಗೊಂದಲ)

ಅಧ್ಯಕ್ಷರು:- ಮಾನ್ಯ ಬೈರೇಗೌಡರೇ, ಅದೇನು ಹೇಳಿ.

ಶ್ರೀ ಸಿ. ಬೈರೇಗೌಡ:- ನನ್ನ ಕ್ಷೇತ್ರದಲ್ಲಿ ಇವರು ಅವೈಜ್ಞಾನಿಕವಾಗಿ ಔಷಧಿಯನ್ನು ಕೊಟ್ಟಿದ್ದರಿಂದ ಒಂದು ಹೆಣ್ಣುಮಗು ಸತ್ತಿದೆ. ಮರದ ಬುಡದಲ್ಲಿ ಔಷಧಿ ಇಂಜಕ್ಷನ್ ಕೊಟ್ಟಿದ್ದರಿಂದ ಮಗುವಿಗೆ ಗೊತ್ತಾಗಲಿಲ್ಲ. ಮಗು ಐಸ್‌ಕ್ಯಾಂಡಿಯೆಂದು ಅದನ್ನು ಚೀಪಿದ್ದರಿಂದ ಸತ್ತಿದೆ.

ಶ್ರೀ ಎಂ.ಶಿವಣ್ಣ:- ನಿಮಗೆ ಯಾವುದಾದರೂ ಔಷಧಿ ಗೊತ್ತಿದ್ದರೆ ಹೇಳಿ.

ಶ್ರೀ ಸಿ.ಬೈರೇಗೌಡ:- ಇವರು ಔಷಧಿ ಕೊಟ್ಟಿದ್ದು ಮರಕ್ಕಲ್ಲ, ಮಕ್ಕಳನ್ನು ಸಾಯಿಸುವುದಕ್ಕೆ ಔಷಧಿ ಕೊಟ್ಟಿದ್ದಾರೆ. ನನ್ನ ಕ್ಷೇತ್ರದಲ್ಲಿ ನಾನೇ ಕಣ್ಣಾರೆ ನೋಡಿದ್ದೇನೆ. ಮಕ್ಕಳನ್ನು ಕಳೆದುಕೊಂಡಿರತಕ್ಕವರ ಗತಿ ಏನಾಗಬೇಕು?

ಶ್ರೀ ಡಿ.ಬಿ.ಚಂದ್ರೇಗೌಡ:- ಇಂತಹ ಅವಗಡಗಳೆಲ್ಲಾ ಆಗುತ್ತವೆ, ಆದರೆ ಸಂಸದೀಯ ಜೀವನದಲ್ಲಿ ಪ್ರಶ್ನೋತ್ತರ ಕಾಲದಲ್ಲಿ ವಾಕ್‌ಔಟ್ ಮಾಡತಕ್ಕಂತಹ ಪ್ರಸಂಗಗಳು..... ನಾವು ನಿಯಮಗಳನ್ನು ಪಾಲಿಸದಿದ್ದರೆ....

ಶ್ರೀ ಸಿ.ಬೈರೇಗೌಡ:- ದಯವಿಟ್ಟು ಇದಕ್ಕೆ ಉತ್ತರವನ್ನು ಕೊಡಿಸಿ.

ಅಧ್ಯಕ್ಷರು:- ಒಬ್ಬೊಬ್ಬರು 5-5 ಸಲ ಎಲೆಕ್ಟಾಗಿದ್ದಾರೆ, ಅವರೇ ಹೀಗೆ ಮಾಡಿದರೆ ನಾನೇನು ಮಾಡಲಿ? I am going to close the question hour at 11.20 a.m. ನಾಲ್ಕು ದಿವಸದಿಂದ ಮಾಡುತ್ತಿದ್ದೇವೆ. ನೀವು ಅಬ್ಸರ್ವ್ ಮಾಡಿಲ್ಲ.

ಶ್ರೀ ಸಿ.ಬೈರೇಗೌಡ:- ನಾಲ್ಕು ವರ್ಷದ ಒಂದು ಮಗು ಸತ್ತಿದೆ, ಅವೈಜ್ಞಾನಿಕವಾದ ರೀತಿಯಲ್ಲಿ ಔಷಧಿಯನ್ನು ಕೊಟ್ಟಿದ್ದರಿಂದ, ಆ ಮಗು ಸತ್ತಿದೆ, ಆ ಕುಟುಂಬದ ಗತಿ ಏನಾಗಬೇಕು? ಅದಕ್ಕೆ ದಯವಿಟ್ಟು ಉತ್ತರವನ್ನು ಕೊಡಿಸಬೇಕು.

ಅಧ್ಯಕ್ಷರು:- ಹೆಗಡೆಯವರೇ, ಅದೇನು ಹೇಳಿ. ನೀವು ಸಡನ್ ಆಗಿ ಕೇಳಿದರೆ ಹೇಗೆ ಉತ್ತರವನ್ನು ಕೊಡುತ್ತಾರೆ.